**<u>ದಿನಾಂಕಃ 24.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ ಎ.ಬಿ.ಕೆ. ವಕೀಲರಿಂದಃ</u>**

1) ನಾನು ಮಾಹಿತಿ ನೀಡಿ ಪ್ರಸ್ತುತ ದಾವೆಯನ್ನು ನನ್ನ ತಾಯಿಯ ಮೂಲಕ ಹೂಡಿರುತ್ತೇನೆ. ಪ್ರತಿವಾದಿಗಳು ಸಲ್ಲಿಸಿರುವ ತಕರಾರಿನ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿನ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ. ದಿಃ 27.09.2013 ರ ಪಂಚಾಯಿತಿ ಪಾರಿಕತ್ತನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಒಂದು ನೊಂದಾಯಿತ ವಿಭಾಗ ಪತ್ರವನ್ನು ನೋಡಿ ಗುರುತಿಸಿದ್ದು **ಅದನ್ನು ನಿಡಿ.1 ಎಂದು ಗುರುತಿಸಲಾಯಿತು.** ನಿಡಿ.1 ರ ಪ್ರತಿ ಪುಟಗಳಲ್ಲಿ ಇರುವ ತನ್ನ ತಂದೆಯ ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳ ಪೈಕಿ 7ನೇ ಪುಟದಲ್ಲಿನ **ಸಾಕ್ಷಿಯ ತಂದೆಯ ಸಹಿಯನ್ನು ನಿಡಿ.1ಎ ಎಂದು ಗುರುತಿಸಲಾಯಿತು.**

2) ನಿಡಿ.1 ರ ವಿಭಾಗ ಪತ್ರದ ಮೇರೆಗೆ ನನ್ನ ತಂದೆ ಮತ್ತು ಆತನ ಸಹೋದರ ಇಬ್ಬರೂ ಕುಟುಂಬದ ಸ್ವತ್ತುಗಳಲ್ಲಿ ವಿಭಾಗ ಮಾಡಿಕೊಂಡು ಅದರ ಮೇರೆಗೆ ಅವರವರ ಹಿಸ್ಸೆಗೆ ಬಂದ ಸ್ವತ್ತುಗಳ ಖಾತೆಗಳನ್ನು ಅವರವರ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ. ಸಾಕ್ಷಿಯು ಪಂಚಾಯಿತಿ ಪಾರಿಕತ್ತು ವಿಭಾಗ ಪತ್ರವನ್ನು ನೋಡಿ ಗುರುತಿಸಿದ್ದು **ಅದನ್ನು ನಿಡಿ.2 ಎಂದು ಗುರುತಿಸಲಾಯಿತು.** ನಿಡಿ.2 ರ ಪ್ರತಿ ಪುಟಗಳಲ್ಲಿ ಇರುವ ತನ್ನ ತಂದೆಯ ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು **ಅವುಗಳನ್ನು ಕ್ರಮವಾಗಿ ನಿಡಿ.2(ಎ) ಇಂದ 2(ಎಫ್) ಎಂದು ಗುರುತಿಸಲಾಯಿತು.**

3) ದಾವಾ ಐಟಂ ನಂ.2 ನೇ ಸ್ವತ್ತಿನ ಖಾತೆಯು ನಿಡಿ.1 ರ ವಿಭಾಗ ಪತ್ರದ ಮೇರೆಗೆ 1ನೇ ಪ್ರತಿವಾದಿಯ ಗಂಡ ಹಾಗೂ 2 ಮತ್ತು 3ನೇ ಪ್ರತಿವಾದಿಗಳ ತಂದೆಯ ಹೆಸರಿಗೆ ದಾಖಲಾಗಿದೆ ಎಂದರೆ ಸರಿ. ಆ ಸಂಬಂಧ ನಾನು ನಿಪಿ.10 ರಂತೆ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ದಾವಾ ಐಟಂ ನಂ.1 ನೇ ಸ್ವತ್ತಿನ 1 ಎಕರೆ 11 ಗುಂಟೆ ಪೈಕಿ 25 ಗುಂಟೆ ಸ್ವತ್ತಿನ ಖಾತೆ ನನ್ನ ತಂದೆಗೂ ಹಾಗೂ ಉಳಿದ 25 ಗುಂಟೆ ಸ್ವತ್ತಿನ ಖಾತೆ 1ನೇ ಪ್ರತಿವಾದಿಯ ಗಂಡನ ಹೆಸರಿಗೆ ಆಗಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ನೇ

ಸ್ವತ್ತಿನ ಒಟ್ಟು ವಿಸ್ತೀರ್ಣದ ಪೈಕಿ 25 ಗುಂಟೆ ಸ್ವತ್ತಿನ ಖಾತೆಯು ನಿಡಿ.2 ರ ಪಂಚಾಯತ್ ಪಾರಿಕತ್ ಆಗುವ ಪೂರ್ವದಲ್ಲಿಯೇ ನನ್ನ ತಂದೆಯ ಹೆಸರಿಗೆ ದಾಖಲಾಗಿತ್ತು. ನಿಪಿ.3 ರ ಪ್ರಕಾರ ದಾವಾ ಐಟಂ ನಂ.1 ನೇ ಸ್ವತ್ತಿನ ಒಟ್ಟು ವಿಸ್ತೀರ್ಣದ ಪೈಕಿ 25 ಗುಂಟೆ ಸ್ವತ್ತು 1ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿ ಹಾಗೂ ಇನ್ನುಳಿದ 25 ಗುಂಟೆ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ದಾವಾ ಐಟಂ ನಂ.1 ನೇ ಸ್ವತ್ತಿನ ಒಟ್ಟು ವಿಸ್ತೀರ್ಣದ ಉತ್ತರ ಭಾಗದ 25 ಗುಂಟೆ ಸ್ವತ್ತು 1ನೇ ಪ್ರತಿವಾದಿಯ ಗಂಡ ಮತ್ತು ದಕ್ಷಿಣ ಭಾಗದ 25 ಗುಂಟೆ ನನ್ನ ತಂದೆಯ ಭಾಗಕ್ಕೆ ಬಂದು ಸದರಿಯವರು ತಮ್ಮ ತಮ್ಮ ಭಾಗದ ಸ್ವತ್ತುಗಳಲ್ಲಿ ಅನುಭೋಗ ಹೊಂದಿರುತ್ತಾರೆ ಎಂದರೆ ಸರಿಯಲ್ಲ.

4) ನಿಡಿ.2 ರ ಪಂಚಾಯತ್ ಪಾರಿಕತ್ ನಲ್ಲಿ ದಾವಾ ಐಟಂ ನಂ.1 ನೇ ಸ್ವತ್ತಿನ ಒಟ್ಟು ವಿಸ್ತೀರ್ಣದ ಪೈಕಿ ಉತ್ತರ ಭಾಗದ 25 ಗುಂಟೆ ಸ್ವತ್ತು 1ನೇ ಪ್ರತಿವಾದಿಯ ಗಂಡನಿಗೆ ಮತ್ತು ದಕ್ಷಿಣ ಭಾಗದ 25 ಗುಂಟೆ ಸ್ವತ್ತು ನನ್ನ ತಂದೆಯ ಭಾಗಕ್ಕೆ ಬಂದಿರುವುದಾಗಿ ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಆ ರೀತಿ ತಮ್ಮ ತಮ್ಮ ಭಾಗದ ಸ್ವತ್ತಗಳಲ್ಲಿ ಸದರಿಯವರು ಅನುಬೋಗ ಹೊಂದಿದ ನಂತರ ಅವರು ನಿಡಿ.2 ರ ಪಂಚಾಯತ್ ಪಾರಿಕತ್ ಅನ್ನು ಆ ಪ್ರಕಾರವಾಗಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

5) ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನನ್ನ ತಂದೆ ತನ್ನ ಅಣ್ಣನ ಮೇಲಿದ್ದ ವಿಶ್ವಾಸ ಮತ್ತು ನಂಬಿಕೆಯಿಂದ ಆತ ತಯಾರಿಸಿಕೊಂಡು ತಂದಿದ್ದ ದಾಖಲೆಗಳಿಗೆ ಸಹಿ ಮಾಡಿದ್ದಾಗಿ ತಿಳಿಸಿರುತ್ತೇನೆ. ಬೋರೇಗೌಡರು ತಯಾರಿಸಿಕೊಂಡು ತಂದಿದ್ದ ನಿಡಿ.1 ರ ನೊಂದಾಯಿತ ವಿಭಾಗ ಪತ್ರಕ್ಕೆ ನನ್ನ ತಂದೆ ಸಹಿಯನ್ನು ಮಾಡಿದ್ದರು. ನನ್ನ ತಂದೆ ಸಹಿಯನ್ನು ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ಮಾಡಿರುತ್ತಾರೆ. ದಾವಾ ಸ್ವತ್ತುಗಳ ಪೈಕಿ ಐಟಂ ನಂ.1 ರ ಸ್ವತ್ತಿನಲ್ಲಿ 25 ಗುಂಟೆ ಇದ್ದು ಅದರ ಪೈಕಿ 12 1/2 ಗುಂಟೆ, ಐಟಂ ನಂ.2 ರ ಸ್ವತ್ತಿನಲ್ಲಿ 7 ಗುಂಟೆ ಇದ್ದು ಅದರ ಪೈಕಿ 3 1/2 ಗುಂಟೆ ಹಾಗೂ ಐಟಂ ನಂ.3 ರ ಸ್ವತ್ತಿನಲ್ಲಿ ಅರ್ಧ ಭಾಗ ನನ್ನ ತಂದೆಯ ಭಾಗಕ್ಕೆ ಬಂದಿರುತ್ತವೆ. ಆ ರೀತಿ ವಿಭಾಗ ಆಗಿರುವ ಸಂಬಂಧ ಪತ್ರವನ್ನು ಮಾಡಿಕೊಂಡಿರುವುದಿಲ್ಲ. ಪ್ರಸ್ತುತ ದಾವಾ ಐಟಂ ನಂ.3 ರ ಸ್ವತ್ತಿನ ಖಾತೆಯು ನನ್ನ ದೊಡ್ಡಪ್ಪ ಬೋರೆಗೌಡರ ಹೆಸರಿನಲ್ಲಿ ಇದೆ.

6) ಖಾನೇಷುಮಾರಿ ನಂಬರ್ 49/40 ರ ಸ್ವತ್ತಿನ ಖಾತೆ ನನ್ನ ತಂದೆಯ ಹೆಸರಿಗೆ ಇರುತ್ತದೆ. ಸದರಿ ಸ್ವತ್ತಿನ ಉದ್ದಅಳತೆ ಎಷ್ಟು ಎಂದು ನನಗೆ ಗೊತ್ತಿಲ್ಲ. ಆ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಆಗಿರುತ್ತದೆ. ಸದರಿ ಸ್ವತ್ತನ್ನು ನನ್ನ ತಂದೆ ಯಾವಾಗ ಮತ್ತು ಯಾರಿಂದ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಆಗಿದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ಸ್ವತ್ತಿನಲ್ಲಿ ಮನೆ ಇರುತ್ತದೆ. ಸದರಿ ಸ್ವತ್ತನ್ನು ನನ್ನ ತಂದೆ ಖರೀದಿ ಪತ್ರದ ಮೂಲಕ ಗಳಿಸಿರುತ್ತಾರೆ.

7) ದಾವಾ ಐಟಂ ನಂ.3 ರ ಸ್ವತ್ತಿನಲ್ಲಿ ಮನೆ ಇರುತ್ತದೆ. ಸದರಿ ಸ್ವತ್ತಿನ ಖಾತೆ 1ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿ ಇರುತ್ತದೆ. ದಾವಾ ಐಟಂ ನಂ.3 ರ ಸ್ವತ್ತಿನಲ್ಲಿ ಪ್ರತಿವಾದಿಗಳು ವಾಸವಿರುತ್ತಾರೆ. ಖಾನೇಷುಮಾರಿ ನಂಬರ್ 49/40 ರ ಸ್ವತ್ತಿನಲ್ಲಿ ನಾವು ವಾಸವಿರುತ್ತೇವೆ. ಆ ಎರಡೂ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು ಆಗಿರುವ ಕಾರಣ ಮತ್ತು ಅವುಗಳನ್ನು ವಿಭಾಗ ಪತ್ರ ದಾಖಲಿಸುವ ಪೂರ್ವದಲ್ಲಿಯೇ ಹಂಚಿಕೆ ಮಾಡಿಕೊಂಡಿದ್ದ ಕಾರಣ ಆ ಎರಡೂ ಸ್ವತ್ತುಗಳನ್ನು ನಿಡಿ.1 ಮತ್ತು 2 ರ ವಿಭಾಗ ಪತ್ರಗಳಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಖಾನೇಷುಮಾರಿ ನಂಬರ್ 49/40 ರ ಸ್ವತ್ತು ಒಟ್ಟು ಕುಟುಂಬದ ಸ್ವತ್ತಾಗಿದ್ದು ನಾನು ಹೇಳಿದಂತೆ ಅದು ನನ್ನ ತಂದಯ ಸ್ವಯಾರ್ಜಿತ ಸ್ವತ್ತು ಆಗಿರುವುದಿಲ್ಲ ಎಂದರೆ ಸರಿಯಲ್ಲ.

8) ಸಾಕ್ಷಿಯು 1995-96 ರ ಪಹಣಿ ಪತ್ರಿಕೆಯನ್ನು ನೋಡಿ ಅದರ ಪ್ರಕಾರ ದಾವಾ ಐಟಂ ನಂ.1 ರ ಜಮೀನಿನ ಒಟ್ಟು ವಿಸ್ತೀರ್ಣದ ಪೈಕಿ 25 ಗುಂಟೆ ಜಮೀನು 1980 ರಲ್ಲಿ ತನ್ನ ತಂದೆಯ ಹೆಸರಿಗೆ ದಾಖಲಾಗಿದ್ದು, ಇನ್ನುಳಿದ 25 ಗುಂಟೆ ಸ್ವತ್ತು 1ನೇ ಪ್ರತಿವಾದಿಯ ಗಂಡನ ಹೆಸರಿಗೆ 1989 ರಲ್ಲಿ ದಾಖಲಾಗಿರುತ್ತದೆ ಎಂದು ನುಡಿದಿರುತ್ತಾರೆ. **ಸದರಿ ದಾಖಲೆಯನ್ನು ನಿಡಿ.3 ಎಂದು ಗುರುತಿಸಲಾಯಿತು.** ನನ್ನ ತಂದೆ ಸರ್ವೆ ನಂ.59 ರಲ್ಲಿನ 25 ಗುಂಟೆ ಸ್ವತ್ತನ್ನು ಬಸವೇಗೌಡರಿಂದ 1967 ರಲ್ಲಿ ಖರೀದಿ ಮಾಡಿರುತ್ತಾರೆ. 1967 ರಲ್ಲಿ ನನ್ನ ತಂದೆ ಮತ್ತು ಆತನ ಸಹೋದರ ಕುಟುಂಬದಿಂದ ಪ್ರತ್ಯೇಕವಾಗಿ ಬೇರೆ ಬೇರೆ ವಾಸ್ತವ್ಯ ಹೂಡಿದ್ದರು. ನನ್ನ ತಂದೆ ಬಸವೇಗೌಡರಿಂದ ಸರ್ವೆ ನಂ.59 ರಲ್ಲಿನ 25 ಗುಂಟೆ ಸ್ವತ್ತನ್ನು

ಖರೀದಿ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಮತ್ತು ಅ ಸಂಬಂಧ ಯಾವುದೇ ಕ್ರಯ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

9) ನನ್ನ ದೊಡ್ಡಪ್ಪ ಬೋರೇಗೌಡರಿಗೆ ಮೂರು ಜನ ಮಕ್ಕಳು. ಅವರೆಂದರೆ 1. ಮಂಚಮ್ಮ, 2. ಸಿದ್ದರಾಜು ಮತ್ತು 3. ದೇವರಾಜು. ಸದರಿ ಮೂರು ಜನರ ಪೈಕಿ ಮಂಚಮ್ಮ ರವರನ್ನು ಈ ಪ್ರರಕಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನನ್ನ ತಂದೆ ಸಿದ್ದೇಗೌಡರಿಗೆ ನಾವು ಒಟ್ಟು 6 ಜನ ಮಕ್ಕಳು. ಅವರೆಂದರೆ 1. ಬಸವರಾಜು, 2. ಸುರೇಶ, 3. ಮಂಜುನಾಥ, 4. ಕೃಷ್ಣ, 5. ರಮೇಶ ಮತ್ತು 6. ತೇಜಸ್ವಿನಿ. ಸದರಿಯವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನನ್ನ ತಂದೆಗೆ ಇಬ್ಬರು ಸಹೋದರಿಯರು. ಅವರೆಂದರೆ 1. ನಿಂಗಮ್ಮ ಮತ್ತು 2. ಮೋಟಮ್ಮ. ಸದರಿಯರವ ಪೈಕಿ ಮೋಟಮ್ಮ ಮೃತಪಟ್ಟಿರುತ್ತಾರೆ. ಮೋಟಮ್ಮ ರವರಿಗೆ 4 ಜನ ಮಕ್ಕಳು. ಅವರೆಂದರೆ 1. ಮಂಚೇಗೌಡ, 2. ಕರೀಗೌಡ, 3. ಹೊಂಬಾಳಮ್ಮ ಮತ್ತು 4. ಗೌರಮ್ಮ. ಸದರಿಯವರನ್ನು ಸಹಾ ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನನ್ನ ಅತ್ತೆ ನಿಂಗಮ್ಮ ಜೀವಿತ ಇರುತ್ತಾರೆ. ಆಕೆಯನ್ನು ಮತ್ತು ಆಕೆಯ 4 ಜನ ಮಕ್ಕಳನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

10) ದಾವಾ ಸ್ವತ್ತುಗಳಲ್ಲಿ ಈಗಾಗಲೇ ವಿಭಾಗವಾಗಿದೆ ಎಂದು ತಿಳಿದಿದ್ದರೂ ಸಹ ಉದ್ದೇಶಪೂರ್ವಕವಾಗಿ ಪ್ರತಿವಾದಿಗಳಿಗೆ ತೊಂದರೆ ಕೊಡಲು ಈ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಖಾನೇಷುಮಾರಿ ನಂಬರ್ 49/40 ರ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇರುವುದಿಲ್ಲ. ಪ್ರತಿವಾದಿಗಳಿಂದ 2 ಲಕ್ಷ ಹಣ ಬೇಕು ಎಂದು ಅವರ ಮೇಲೆ ಒತ್ತಡ ಏರಿದ್ದೆನು ಎಂದರೆ ಸರಿಯಲ್ಲ. ಆ ರೀತಿ ಹಣವನ್ನು ಕೇಳಿದಾಗ ಪ್ರತಿವಾದಿಗಳು ಹಣ ನೀಡದ ಕಾರಣ ಅವರ ವಿರುದ್ಧ ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

11) ದಾವಾ ಐಟಂ ನಂ.3 ರ ಸ್ವತ್ತಿನಲ್ಲಿ ಇದ್ದ ಹಳೆಯ ಮನೆಯನ್ನು ಬೋರೇಗೌಡರು ಕೆಡವಿ ಹೊಸ ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿ. ಈ ಎಲ್ಲಾ ವಿಚಾರಗಳ ಬಗ್ಗೆ ತಿಳಿದಿದ್ದರೂ ಸಹ ಸುಳ್ಳು ಪ್ರಕರಣ ಹೂಡಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಮೇಲೆ ನನಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇರದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**